# ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

( ಕರ್ನಾಟಕ ಸರಕಾರದ ಉದ್ಯಮ)

**ಹೊಯ್ಗೆಬಜಾರ್, ಮಂಗಳೂರು – 575001**

**E-Mail:** kfdcixe@yahoo.com

**Website:kfdcfish.com**

**ದೂರವಾಣಿ : (ಕಛೇರಿ) 2421281/2**

**ಫ್ಯಾಕ್ಸ್ (0824) 2424560**


**ಸಂಖ್ಯೆ:ಕ.ಮಿ.ಅ.ನಿ.ನಿ/ಹೆಬ್ಬಾಳ/7/ಶೀ.ಸಂ/ಲೈಸೆನ್ಸ್/2015–16** **ದಿನಾಂಕ: 03.09.2015**

**<u>ಟೆಂಡರ್ ಪ್ರಕಟನೆ ಸಂಖ್ಯೆ:07/ಕ.ಮೀ.ಅ.ನಿ.ನಿ./ಹೆಬ್ಬಾಳ/ಶೀ.ಸಂ/ಲೈಸೆನ್ಸ್/2015–16</u>** **<u>ದಿನಾಂಕ:03.09.2015</u>**

ನಿಗಮವು ಬೆಂಗಳೂರಿನ ಹೆಬ್ಬಾಳದಲ್ಲಿ ನಿರ್ಮಿಸಿರುವ ಶೀತಲಾಗಾರ ಸಂಕೀರ್ಣದಲ್ಲಿ ತಲಾ **5** ಟನ್ ಸಾಮರ್ಥ್ಯದ **4** ಫ್ರೀಜರ್, **5** ಚಿಲ್ಲರ್ ಹಾಗೂ **500** ಕೆ.ಜಿ.ಸಾಮರ್ಥ್ಯದ **1** ಬ್ಲಾಸ್ಟ್ ಫ್ರೀಜರ್‌ನ್ನು 5 ವರ್ಷಗಳ ಅವಧಿಗೆ ಲೈಸನ್ಸ್ ಮೇಲೆ ನಡೆಸಲು ಆಸಕ್ತರಿಂದ ಟೆಂಡರ್ ಕರೆಯಲಾಗಿದೆ..

| **ಕ್ರ.ಸಂ** | **ಶೀತಲಾಗಾರ ಸಂಕೀರ್ಣದ ಹೆಸರು & ವಿಳಾಸ** | **ಪ್ರಾರಂಭಿಕ ಮುಂಗಡ ಹಣ** | **ಟೆಂಡರ್ ಫಾರ್ಮ್‌ನ ಬೆಲೆ (ತೆರಿಗೆ ಸೇರಿ)** | **ಶೀತಲಾಗಾರ ಸಂಕೀರ್ಣದ ಕೊಠಡಿಗಳನ್ನು ಹಸ್ತಾಂತರಿಸುವ ಅವಧಿ** |
|---|---|---|---|---|
| 1. | ನಿಗಮದ ಶೀತಲಾಗಾರ ಸಂಕೀರ್ಣದಲ್ಲಿರುವ ತಲಾ 5 ಟನ್ ಸಾಮರ್ಥ್ಯದ 4 ಫ್ರೀಜರ್, (FRZ – 01, 02,03 & 04 ) 5 ಚಿಲ್ಲರ್ (CHL – 01, 02,03, 04 & 05) ಹಾಗೂ 1 ಬ್ಲಾಸ್ಟ್ ಫ್ರೀಜರ್,<br><u>ವಿಳಾಸ:</u><br>**ಕರ್ನಾಟಕ ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ, ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ. ಪಾಪಣ್ಣ ಲೇಔಟ್ ಹೆಬ್ಬಾಳ ,ಬೆಂಗಳೂರು.** | ರೂ.10,000/– | ರೂ.1000/– | 1 ತಿಂಗಳು |

1. ಟೆಂಡರ ಫಾರ್ಮ್‌ಗಳನ್ನು ನೀಡುವ ದಿನಾಂಕ : 04.09.2015 ರಿಂದ 21.09.2015 ರ ಸಂಜೆ 5.00 ಗಂಟೆಯವರೆಗೆ
2. ಮೊಹರಾದಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 22.09.2015 ಸಂಜೆ 4.30 ಗಂಟೆಯವರೆಗೆ
3. ಟೆಂಡರ್ ತೆರೆಯುವ ದಿನಾಂಕ ಹಾಗೂ ಸ್ಥಳ : 22.09.2015 ರ ಸಂಜೆ 5.00 ಗಂಟೆಗೆ ನಿಗಮದ ಕೇಂದ್ರ ಕಛೇರಿ, ಮಂಗಳೂರು.

ಆಸಕ್ತರು ಟೆಂಡರ್ ಅರ್ಜಿ ನಮೂನೆ ಷರತ್ತು ಮತ್ತು ನಿಬಂಧನೆಗಳನ್ನು ನಿಗಮದ ಕೇಂದ್ರ ಕಛೇರಿ ಮಂಗಳೂರು ಹಾಗೂ ಕಬ್ಬನ್‌ಪಾರ್ಕ್, ಬೆಂಗಳೂರು. (ಚಲನವಾಣಿ ಸಂಖ್ಯೆ: **09686695652)** ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದು.

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಹೊಯ್ಗೆಬಜಾರ್, ಮಂಗಳೂರು – 575001

E-Mail: kfdcixe@yahoo.com ದೂರವಾಣಿ : (ಕಛೇರಿ) 2421281/2
Website: kfdcfish.com ಫ್ಯಾಕ್ಸ್ (0824) 2424560

---

ಸಂಖ್ಯೆ:ಕ.ಮಿ.ಅ.ನಿ.ನಿ/ಹೆಬ್ಬಾಳ/7/ಶೀ.ಸಂ/ಲೈಸೆನ್ಸ್/2015–16 ದಿನಾಂಕ: 03.09.2015

## ಷರತ್ತು ಮತ್ತು ನಿಬಂಧನೆಗಳು

1. ನಿಗಮವು ಬೆಂಗಳೂರಿನ ಹೆಬ್ಬಾಳದಲ್ಲಿರುವ ಕರ್ನಾಟಕ ಪಶುಸಂಗೋಪನೆ ಮತ್ತು ಮೀನುಗಾರಿಕೆ ವಿಶ್ವವಿದ್ಯಾನಿಲಯ, ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರದ ಆವರಣದಲ್ಲಿ ನಿರ್ಮಿಸಿರುವ ಘನಿಕೃತ ಮತ್ತು ಶೀತಲಾಗಾರ ಸಂಕೀರ್ಣದಲ್ಲಿರುವ ತಲಾ 5 ಟನ್ ಸಾಮರ್ಥ್ಯದ 4 ಫ್ರೀಜರ್, 5 ಚಿಲ್ಲರ್ ಹಾಗೂ 500 ಕೆ.ಜಿ.ಸಾಮರ್ಥ್ಯದ 1 ಬ್ಲಾಸ್ಟ್ ಫ್ರೀಜರ್‌ನ್ನು 5 ವರ್ಷಗಳ ಅವಧಿಗೆ ಲೈಸನ್ಸ್ ಮೇಲೆ ನಡೆಸಲು ಆಸಕ್ತರಿಂದ ಟೆಂಡರ್ ಕರೆಯಲಾಗಿದೆ.

2. ನಿಗಮದ ಶೀತಲಾಗಾರ ಸಂಕೀರ್ಣವನ್ನು ನಡೆಸಲು ಟೆಂಡರ್‌ದಾರರು ಸೂಚಿಸುವ ಬಿಡ್ ಮೊತ್ತವು ನಿಗಮದ ಕನಿಷ್ಠ ಬಿಡ್ ರೂ.1,00,000/–(ರೂಪಾಯಿ ಒಂದು ಲಕ್ಷ ) (ತೆರಿಗೆ ಪ್ರತ್ಯೇಕ) ಕ್ಕಿಂತ ಕಡಿಮೆಯಾಗಿರಬಾರದು

3. ನಿಗಮದ ಶೀತಲಾಗಾರ ಸಂಕೀರ್ಣದಲ್ಲಿರುವ 5 ಟನ್ ಸಾಮರ್ಥ್ಯದ 4 ಫ್ರೀಜರ್‌ಗಳನ್ನು, **FRZ–** 01,02,03 ಮತ್ತು 04 ಎಂದು ಸಂಖ್ಯೆಯನ್ನು ನೀಡಿದ್ದು ಹಾಗೂ 5 ಚಿಲ್ಲರ್‌ಗಳನ್ನು **CHL**–01,02,03,04 ಮತ್ತು 05 ಎಂದು ಸಂಖ್ಯೆಯನ್ನು ನೀಡಲಾಗಿದ್ದು ಮತ್ತು 1 ಬ್ಲಾಸ್ಟ್ ಫ್ರೀಜರ್‌ಗೆ ಏರ್ ಬ್ಲಾಸ್ಟ್ ಫ್ರೀಜರ್ ಎಂದು ಹೆಸರಿಸಲಾಗಿದೆ.

4. ನಿಗಮದ ಶೀತಲಾಗಾರ ಸಂಕೀರ್ಣದಲ್ಲಿರುವ ಪ್ರತಿಯೊಂದು ಚಿಲ್ಲರ್, ಫ್ರೀಜರ್, ಮತ್ತು ಏರ್ ಬ್ಲಾಸ್ಟ್ ಫ್ರೀಜರ್‌ಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಸಂಪರ್ಕವಿದ್ದು ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲಾಗಿದೆ ಯಶಸ್ವಿ ಟೆಂಡರ್‌ದಾರರು ಪ್ರತಿ ತಿಂಗಳು ಉಪಯೋಗಿಸಿದ ವಿದ್ಯುತ್ ಬಿಲ್ಲನ್ನು ಬೆಸ್ಕಾಂಗೆ ಪಾವತಿಸಿ ರಶೀದಿಯ ಯಥಾ ಪ್ರತಿಯನ್ನು ನಿಗಮಕ್ಕೆ ನೀಡಬೇಕು.

5. ಟೆಂಡರ್‌ನಲ್ಲಿ ಭಾಗವಹಿಸುವ ಟೆಂಡರ್‌ದಾರರು **ರೂ. 10,000/–ದ ಡಿಮಾಂಡ್ ಡ್ರಾಫ್ಟ್‌ನ್ನು** ಪ್ರಾರಂಭಿಕ ಮುಂಗಡ ಠೇವಣಿಯಾಗಿ. **ವ್ಯವಸ್ಥಾಪಕ ನಿರ್ದೇಶಕರು ಕರ್ನಾಟದ ಮೀನುಗಾರಿಕಾ ಅಭಿವೃಧಿ ನಿಗಮ ನಿಯಮಿತ, ಮಂಗಳೂರು**. ಇವರ ಹೆಸರಿನಲ್ಲಿ ಖರೀದಿಸಿ ಟೆಂಡರ್‌ನೊಂದಿಗೆ ಸಲ್ಲಿಸಬೇಕು.

**ಮೊಹರು** **ಟೆಂಡರ್‌ದಾರರ ಸಹಿ**

ಭರ್ತಿ ಮಾಡಿದ ಟೆಂಡರ್ ಅರ್ಜಿ ನಮೂನೆಗಳನ್ನು ರೂ.10,000/-ದ ಪ್ರಾರಂಭಿಕ ಮುಂಗಡ ಠೇವಣಿಯೊಂದಿಗೆ ಹಾಗೂ ಟೆಂಡರ್ ಫಾರ್ಮ್‌ನ್ನು ನಿಗಮದ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿದ ಪಕ್ಷದಲ್ಲಿ ಟೆಂಡರ್‌ಫಾರ್ಮ್ ಬೆಲೆ ರೂ.1,000/-ದ ಡಿಡಿಯನ್ನು ಕವರ್‌ನಲ್ಲಿ ಇರಿಸಿ, ಮುದ್ರೆ (ಸಿಲ್) ಮಾಡಿ **"ನಿಗಮದ ಹೆಬ್ಬಾಳದ ಶೀತಲಾಗಾರ ಸಂಕೀರ್ಣದ ಲೈಸೆನ್ಸ ಬಗ್ಗೆ ಟೆಂಡರ್ ಎಂಬ ಮೆಲ್ಬಾರಹದೊಂದಿಗೆ"** ದಿನಾಂಕ: 22-09-2015 ರ ಸಂಜೆ 4-30 ಗಂಟೆಯೊಳಗೆ ನಿಗಮದ ಕೇಂದ್ರ ಕಛೇರಿ ಮಂಗಳೂರು ಇಲ್ಲಿಗೆ ನೀಡತಕ್ಕದ್ದು ಭರ್ತಿ ಮಾಡಿದ ಟೆಂಡರ್ ಅರ್ಜಿ ನಮೂನೆಗಳನ್ನು ರೂ.10,000/-ದ ಪ್ರಾರಂಭಿಕ ಮುಂಗಡ ಠೇವಣಿಯೊಂದಿಗೆ ಹಾಗೂ ಟೆಂಡರ್ ಫಾರ್ಮ್‌ನ್ನು ನಿಗಮದ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿದ ಪಕ್ಷದಲ್ಲಿ ಟೆಂಡರ್‌ಫಾರ್ಮ್ ಬೆಲೆ ರೂ.1,000/-ದ ಡಿಡಿಯನ್ನು ಕವರ್‌ನಲ್ಲಿ ಇರಿಸಿ, ಮುದ್ರೆ (ಸಿಲ್) ಮಾಡಿ **"ನಿಗಮದ ಹೆಬ್ಬಾಳದ ಶೀತಲಾಗಾರ ಸಂಕೀರ್ಣದ ಲೈಸೆನ್ಸ ಬಗ್ಗೆ ಟೆಂಡರ್ ಎಂಬ ಮೆಲ್ಬಾರಹದೊಂದಿಗೆ"** ದಿನಾಂಕ: 22-09-2015 ರ ಸಂಜೆ 4-30 ಗಂಟೆಯೊಳಗೆ ನಿಗಮದ ಕೇಂದ್ರ ಕಛೇರಿ ಮಂಗಳೂರು ಇಲ್ಲಿಗೆ ನೀಡತಕ್ಕದ್ದು

6. ಟೆಂಡರ್‌ದಾರರು ಟೆಂಡರ್ ಅರ್ಜಿ ನಮೂನೆಗಳನ್ನು ಕೂಲಂಕುಷವಾಗಿ ಓದಿ ಸರಿಯಾಗಿ ಭರ್ತಿ ಮಾಡುವುದು.

7. ಟೆಂಡರ್ ಅರ್ಜಿ ನಮೂನೆಯಲ್ಲಿ ನೀಡಿರುವ ಅನುಬಂಧ-**1** ರಲ್ಲಿ ಕಂಪನಿ/ಪ್ರೊಪ್ರೈಟರ್‌ಶಿಫ್/ವೈಯಕ್ತಿಕ ಮಾಹಿತಿ ಹಾಗೂ ಸಂಬಂದಪಟ್ಟ ದಾಖಲೆಗಳು ಹಾಗೂ ಅನುಬಂಧ-**2** ರಲ್ಲಿ ಮಾಸಿಕ ಗರಿಷ್ಠ ಮೊತ್ತವನ್ನು (ತೆರಿಗೆಯನ್ನು ಹೊರತುಪಡಿಸಿ) ಕಡ್ಡಾಯವಾಗಿ ಭರ್ತಿ ಮಾಡುವುದು.

8. ಅಪೂರ್ಣ ಮಾಹಿತಿ, ಪೂರ್ಣ ಭರ್ತಿ ಮಾಡದ ಮತ್ತು ಸಂಬಂದಪಟ್ಟ ದಾಖಲೆಗಳಿಲ್ಲದ ಟೆಂಡರ್ ಫಾರ್ಮಗಳು ಟೆಂಡರ್ ತೆರೆಯುವ ಸಮಯದಲ್ಲಿ ಕಂಡುಬಂದರೆ ಅಂತಹ ಟೆಂಡರ್ ಫಾರ್ಮಗಳನ್ನು ತಿರಸ್ಕರಿಸಲಾಗುವುದು.

9. ಅವಧಿ ನಂತರ ಬಂದ ಟೆಂಡರ್‌ಗಳನ್ನು ಹಾಗೂ ಪ್ರಾರಂಭಿಕ ಮುಂಗಡ ಠೇವಣಿ ಇಲ್ಲದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

10. ಟೆಂಡರ್‌ನಲ್ಲಿ ಮಾಸಿಕ ಗರಿಷ್ಠ ಮೊತ್ತವನ್ನು (ತೆರಿಗೆ ಹೊರತು ಪಡಿಸಿ) ಸೂಚಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಲಾಗುವುದು.

11. ಯಶಸ್ವಿ ಟೆಂಡರ್‌ದಾರರು ತಾವು ನಮೂದಿಸಿದ **ಮಾಸಿಕ ಗರಿಷ್ಠ ಲೈಸೆನ್ಸ್ ಫೀ/ಶುಲ್ಕದ ಮೂರು ತಿಂಗಳ ಮೊತ್ತವನ್ನು ಭದ್ರತಾ ಠೇವಣಿಯಾಗಿ ಡಿ.ಡಿ. ಮುಖಾಂತರ** ನಿಗಮಕ್ಕೆ ನೀಡಬೇಕು ಹಾಗೂ ಹೆಚ್ಚುವರಿಯಾಗಿ **ಇದೇ ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು** ನೀಡುವುದು. ಟೆಂಡರ್ ಅವಧಿ ಮುಗಿದ ನಂತರ ಭದ್ರತಾ ಠೇವಣಿಯನ್ನು ಬಡ್ಡಿ ರಹಿತವಾಗಿ ಹಿಂದಿರುಗಿಸಲಾಗುವುದು.

12. ಪ್ರತಿ ವರ್ಷವು ಹಿಂದಿನ ವರ್ಷದ ಮಾಸಿಕ ಲೈಸೆನ್ಸ್ ಫೀಯ ಮೇಲೆ ವಿಧಿಸುವ ಶೇಕಡ 5 ರ ಹೆಚ್ಚಳವನ್ನು ಸೇರಿಸಿ ಆ ವರ್ಷದ ಮಾಸಿಕ ಶುಲ್ಕ/ಫೀಯನ್ನು ಪಾವತಿಸಲು ಒಪ್ಪಿರಬೇಕು.

13. ಯಶಸ್ವಿ ಟೆಂಡರ್‌ದಾರರು ತಿಂಗಳ ಬಾಡಿಗೆಯನ್ನು ಮುಂದಿನ ತಿಂಗಳ 10ನೇ ತಾರಿಖಿನ ಒಳಗಡೆ ಪಾವತಿಸಿ ರಶೀದಿ ಪಡೆಯತಕ್ಕದ್ದು.

**ಮೊಹರು** **ಟೆಂಡರ್‌ದಾರರ ಸಹಿ**

14. ಯಶಸ್ವಿ ಟೆಂಡರ್‌ದಾರರು ಸತತ 2 ತಿಂಗಳ ಮಾಸಿಕ ಲೈಸೆನ್ಸ್ ಫೀಯನ್ನು ಪಾವತಿಸಲು ವಿಫಲರಾದಲ್ಲಿ ಅವರಿಗೆ ವಾರ್ಷಿಕ ಶೇಕಡ 10 ರ ದರದಲ್ಲಿ ಬಡ್ಡಿಯನ್ನು ಪಾವತಿಗೆ ನಿಗದಿಪಡಿಸಿದ ದಿನಾಂಕದಿಂದ ವಿಧಿಸಲಾಗುವುದು.

15. ಯಶಸ್ವಿ ಟೆಂಡರ್‌ದಾರರು ಸತತ 3 ತಿಂಗಳ ಮಾಸಿಕ ಲೈಸೆನ್ಸ್ ಫೀಯನ್ನು ಪಾವತಿಸಲು ವಿಫಲರಾದಲ್ಲಿ ಈ ಬಗ್ಗೆ ನಿಗಮದಿಂದ 15 ದಿನಗಳ ನೋಟಿಸ್ ನೀಡಲಾಗುವುದು ಹಾಗೂ ನಿಗಮದೊಂದಿಗಿನ ಲೈಸೆನ್ಸ್ ಯನ್ನು ರದ್ದುಪಡಿಸಿ ಸದರಿ ಶೀತಲಾಗಾರ ಸಂಕೀರ್ಣವನ್ನು ನಿಗಮದ ವಶಕ್ಕೆ ಪಡೆದುಕೊಳ್ಳುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿದೆ.

16. ಯಶಸ್ವಿ ಟೆಂಡರ್‌ದಾರರು ನಿಗಮದಿಂದ ಲೈಸನ್ಸ್ ಮೇಲೆ ನಡೆಸಲು ಪಡೆದುಕೊಂಡ ಶೀತಲಾಗಾರ ಸಂಕೀರ್ಣದಲ್ಲಿ ಮೀನು ಹಾಗೂ ಮೀನಿನ ಉತ್ಪನ್ನಗಳ ವ್ಯವಹಾರವನ್ನು ಮಾಡುವುದು.

17. ಯಶಸ್ವಿ ಟೆಂಡರ್‌ದಾರರು ನಿಗಮದಿಂದ ಲೈಸನ್ಸ್ ಮೇಲೆ ಪಡೆದುಕೊಂಡಿರುವ ಶೀತಲಾಗಾರ ಸಂಕೀರ್ಣದ ನಿರ್ವಹಣೆ, ವಿದ್ಯುತ್‌ಬಿಲ್ಲು, ನೀರಿನಬಿಲ್ಲು, ತೆರಿಗೆಗಳು, ಯಂತ್ರೋಪಕರಣಗಳ ಬಿಡಿಭಾಗಗಳ ಖರೀದಿ ಹಾಗೂ ನಿರ್ವಹಣೆ ಹಾಗೂ ಇತರೇ ದುರಸ್ತಿ ವೆಚ್ಚಗಳನ್ನು ಟೆಂಡರ್‌ದಾರರೇ ನಿರ್ವಹಿಸಬೇಕು. ಸದರಿ ಸಂಕೀರ್ಣವನ್ನು ನಿರ್ವಹಿಸಲು ಬೇಕಾದ ಸಂಸ್ಕರಣಾ ಉಪಕರಣಗಳು ತಂತ್ರಜ್ಞರು ಹಾಗೂ ನುರಿತ ಕೆಲಸಗಾರರನ್ನು ಯಶಸ್ವಿ ಟೆಂಡರ್‌ದಾರರೇ ನೇಮಿಸಬೇಕು.

18. ಯಶಸ್ವಿ ಟೆಂಡರ್‌ದಾರರು ಅವರ ಕೆಲಸಗಾರರು/ಕಾರ್ಮಿಕರಿಗೆ ಬೇಕಾದ ವಸತಿ ಹಾಗೂ ಇತರ ಮೂಲಸೌಕರ್ಯಗಳನ್ನು ಪ್ರತ್ಯೇಕವಾಗಿ ಶೀತಲಾಗಾರ ಸಂಕೀರ್ಣ ಆವರಣದ ಹೊರಗಡೆ ಬೇರೆ ಸ್ಥಳದಲ್ಲಿ ತಮ್ಮ ಸ್ವಂತ ವೆಚ್ಚದಲ್ಲಿ ಮಾಡಿಕೊಳ್ಳುವುದು.

19. ನಿಗಮದಿಂದ ಲೈಸನ್ಸ್ ಮೇಲೆ ನಡೆಸಲು ಪಡೆದ ಚಿಲ್ಲರ್, ಫ್ರೀಜರ್ ಹಾಗೂ ಏರ್ ಬ್ಲಾಸ್ಟ್ ಫ್ರೀಜರ್, ಯಂತ್ರೋಪಕರಣಗಳು, ಫ್ರೀಜರ್ ಗ್ಯಾಸ್ ಇತರೇ ಉಪಕರಣಗಳನ್ನು ಉತ್ತಮವಾಗಿ ನಿರ್ವಹಿಸಿ ಲೈಸನ್ಸ್ ಅವಧಿ ಮುಗಿದ ನಂತರ ನಿಗಮಕ್ಕೆ ಹಿಂದಿರುಗಿಸಬೇಕು. ಯಾವುದೇ ಉಪಕರಣಗಳು ಹಾಳಾಗಿದ್ದಲ್ಲಿ ಅದರ ಪ್ರಚಲಿತ ಮಾರುಕಟ್ಟೆ ದರವನ್ನು ನಿಗಮಕ್ಕೆ ನೀಡಬೇಕು. ತಪ್ಪಿದ್ದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ನಿಗಮದಿಂದ ಲೈಸನ್ಸ್ ಮೇಲೆ ನೀಡಿದ ಫ್ರೀಜರ್, ಚಿಲ್ಲರ್, ಬ್ಲಾಸ್ಟ್ ಫ್ರೀಜರ್‌ಗಳನ್ನು ಲೈಸನ್ಸ್ ಅವಧಿಯಲ್ಲಿ ಉತ್ತಮ ರೀತಿಯಲ್ಲಿ ನಿರ್ವಹನಣೆ ಮಾಡದೇ ಇದ್ದ ಪಕ್ಷದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಲೈಸನ್ಸ್‌ನ್ನು ರದ್ದುಪಡಿಸಲಾಗುವುದು.

21. ನಿಗಮದಿಂದ ಪಡೆದುಕೊಂಡ ಶೀತಲಾಗಾರ ಸಂಕೀರ್ಣಕ್ಕೆ ಫೈರ್ ಇನ್ಸ್ಯೂರೆನ್ಸ್ ಮತ್ತು ಶಾಪ್ ಇನ್ಸ್ಯೂರೆನ್ಸ್ **(Fire Insurance & Shop Insurance)**ನ್ನು ಮಾಡಿಸಿ ವಿಮೆಯ ಪ್ರೀಮಿಯಂನ್ನು ಪಾವತಿಸಿ ಯಥಾಪ್ರತಿಯನ್ನು ನಿಗಮಕ್ಕೆ ನೀಡಬೇಕು.

22. ನಿಗಮಕ್ಕೆ ಯಾವುದೇ ಸಂದರ್ಭದಲ್ಲಿ ಸದರಿ ಶೀತಲಾಗಾರ ಸಂಕೀರ್ಣವು ಅವಶ್ಯವಿದ್ದಲ್ಲಿ 2 ತಿಂಗಳ ನೋಟಿಸಿನ ಮೇಲೆ ಯಾವುದೇ ತಕರಾರು ಮಾಡದೇ ನಿಗಮಕ್ಕೆ ಬಿಟ್ಟು ಕೊಡಬೇಕು ಅಲ್ಲದೆ ಲೈಸನ್ಸ್ ಅವಧಿಯ ಮುಂಚಿತವಾಗಿ ಬಿಡುವುದಾದಲ್ಲಿ 2 ತಿಂಗಳ ಮುಂಚಿತವಾಗಿ ನಿಗಮಕ್ಕೆ ಲಿಖಿತವಾಗಿ ತಿಳಿಸಬೇಕು.

**ಮೊಹರು** **ಟೆಂಡರ್‌ದಾರರ ಸಹಿ**

23. ನಿಗಮದಿಂದ ಲೈಸನ್ಸ್ ಮೇಲೆ ಪಡೆದ ಶೀತಲಾಗಾರ ಸಂಕೀರ್ಣವನ್ನು ಶುಚಿಯಾಗಿಟ್ಟು, ಹಾಳುಮಾಡದೆ ಹಾಗೂ ಆಕೃತಿಯನ್ನು ಬದಲಾವಣೆ ಮಾಡದೆ, ಬೇರೆ ಯಾವುದೇ ನ್ಯಾಯಬಾಹಿರ ಚಟುವಟಿಕೆಗಳನ್ನು ಮಾಡದೇ ನಿರ್ವಹಿಸತಕ್ಕದ್ದು. ಯಾವುದೇ ನ್ಯಾಯಾಬಾಹಿರ ಚಟುವಟಿಕೆಗಳು ಕಂಡುಬಂದಲ್ಲಿ ತಕ್ಷಣ ಯಶಸ್ವಿ ಟೆಂಡರ್‌ದಾರರು ಪಡೆದುಕೊಂಡ ಶೀತಲಾಗಾರ ಸಂಕೀರ್ಣವನ್ನು ನಿಗಮದ ವಶಕ್ಕೆ ತೆಗೆದುಕೊಂಡು ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಒಂದು ವೇಳೆ ಸದರಿ ಶೀತಲಾಗಾರದಲ್ಲಿ ಟೆಂಡರ್‌ದಾರರ ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡುವುದಾದರೆ ನಿಗಮದ ಮೂಲಕ ಲಿಖಿತ ಅನುಮತಿ ಪಡೆಯಬೇಕು.

24. ಸದರಿ ಶೀತಲಾಗಾರ ಸಂಕೀರ್ಣಕ್ಕೆ ಸಂಬಂಧಿಸಿದ ಎಲ್ಲಾ ಪರವಾಣಿಗೆಗಳನ್ನು ಹಾಗೂ ಯಾವುದೇ ಸ್ಥಳೀಯ ತೆರಿಗೆಗಳನ್ನು ಯಶಸ್ವಿ ಟೆಂಡರ್‌ದಾರರು ಪಾವತಿಸಬೇಕು.

25. ಸದರಿ ಶೀತಲಾಗಾರ ಸಂಕೀರ್ಣದಲ್ಲಿ ಯಾವುದೇ ರೀತಿಯ ತಂಬಾಕು/ಮಧ್ಯಪಾನ/ಧೂಮಪಾನ /ಸ್ಫೋಟಕ ಅಥವಾ ಯಾವುದೇ ನಿಷೇದಿಸಲ್ಪಟ್ಟ ಸಾಮಾಗ್ರಿಗಳನ್ನು ಶೇಖರಿಸಿಡುವುದು ಹಾಗೂ ಮಾರಾಟ ಮಾಡುವುದನ್ನು ನಿಷೇದಿಸಿದೆ.

26. ಸದರಿ ಶೀತಲಾಗಾರಸಂಕೀರ್ಣದ ಆವರಣದಲ್ಲಿ ಶುಚಿತ್ವ ಮತ್ತು ನೈರ್ಮಲ್ಯತೆಯನ್ನು ಕಾಪಾಡುವುದು ಹಾಗೂ ಕಸ ಮತ್ತು ಮೀನಿನ ಇತರೇ ತ್ಯಾಜ್ಯಗಳನ್ನು ದಿನನಿತ್ಯ ವಿಲೇವಾರಿ ಮಾಡಬೇಕು. ಮೀನುಗಾರಿಕಾ ಸಂಶೋದನೆ ಮತ್ತು ಮಾಹಿತಿ ಕೇಂದ್ರದವರಿಂದ ಯಾವುದೇ ದೂರು ಬಾರದ ರೀತಿಯಲ್ಲಿ ಕಾರ್ಯನಿರ್ವಹಿಸುವುದು.

27. ನಿಗಮದ ಅಧಿಕಾರಿಗಳು/ ಮೀನುಗಾರಿಕಾ ಸಂಶೋದನೆ ಮತ್ತು ಮಾಹಿತಿ ಕೇಂದ್ರದ ಅಧಿಕಾರಿಗಳು ಭೇಟಿ ನೀಡಿದ ಸಮಯದಲ್ಲಿ ಸದ್ರಿ ಶೀತಲಾಗಾರ ಸಂಕೀರ್ಣದ ಪರಿಶೀಲನೆ ಮಾಡಲು ಎಲ್ಲಾ ಸಹಕಾರವನ್ನು ನೀಡಬೇಕು.

28. ಮೇಲಿನ ಷರತ್ತುಗಳಲ್ಲದೆ ನಿಗಮವು ಇನ್ನು ಮುಂದೆ ಯಾವುದೇ ಷರತ್ತುಗಳನ್ನು ಕಾಲಕಾಲಕ್ಕೆ ವಿಧಿಸುವುದೂ ಅಂತಹ ಷರತ್ತುಗಳನ್ನು ಪೂರ್ಣವಾಗಿ ಒಪ್ಪಬೇಕು. ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಶೀತಲಾಗಾರ ಸಂಕೀರ್ಣವನ್ನು ನಿಗಮದ ವಶಕ್ಕೆ ಪಡೆದುಕೊಂಡು ಭದ್ರತಾ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

29. ಯಾವುದೇ ಕಾರಣವನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ರದ್ದುಗೊಳಿಸುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ.

30. ಲೈಸೆನ್ಸ್ ಅವಧಿಯಲ್ಲಿ ಯಾವುದೇ ತಕರಾರು ಉದ್ಭವಿಸಿದಲ್ಲಿ ನಿಗಮದ ತೀರ್ಮಾನವೇ ಅಂತಿಮವಾಗಿರುತ್ತದೆ. ಹಾಗೂ ಯಾವುದೇ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಹೋಗುವ ಸಂದರ್ಭದಲ್ಲಿ ಅದು ಮಂಗಳೂರು ನ್ಯಾಯಾಲಯಾದ ವ್ಯಾಪ್ತಿಯಲ್ಲಿ ಮಾತ್ರವಾಗಿರಬೇಕು.

31. ನಿಗಮಕ್ಕೆ ಈಗಾಗಲೇ ಸುಸ್ತಿದಾರರಾಗಿರುವವರು ಈ ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ.

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

**ಮೊಹರು** **ಟೆಂಡರ್‌ದಾರರ ಸಹಿ**

## ಅನುಬಂಧ–1

**ಕಂಪನಿ/ಪ್ರೂಫ್ರೈಟರ್‌ಶಿಫ್/ವೈಯಕ್ತಿಕ ಮಾಹಿತಿ**

| | |
|---|---|
| ಟೆಂಡರ್ ಫಾರ್ಮನಲ್ಲಿ ಸೂಚಿಸಿದ ಇ.ಎ.ಆ ಬಗ್ಗೆ ಲಗತಿಸ್ತಿದ ವಿವರಗಳು<br>(E.M.D ಪಡೆದ ಬ್ಯಾಂಕ್‌ನ ಹೆಸರು ವಿಳಾಸ ಮತ್ತು ಡಿ.ಡಿ.ಸಂಖ್ಯೆ ನಮೂದಿಸುವುದು.) | |
| ಕಂಪನಿ/ಪ್ರೂಫ್ರೈಟರ್‌ಶಿಫ್/ವೈಯಕ್ತಿಕಕ್ಕೆ ಸಂಬಂದಿಸಿದ ವಿವರಗಳ ದೃಡಿಕೃತ ಪ್ರತಿಗಳು | |
| VAT ಮತ್ತು PAN ದಾಖಲೆಗಳ ದೃಡಿಕೃತ ಪ್ರತಿಗಳು | |
| ಆಧಾರ್ ಕಾರ್ಡ್, ಚುನಾವನೆ ಗುರುತಿನ ಚೀಟಿ ಮತ್ತು ಖಾಯಂ ವಿಳಾಸಕ್ಕೆ ಸಂಬಂದಿಸಿದ ದೃಡಿಕೃತ ಪ್ರತಿಗಳು | |
| ಪ್ರಸ್ತುತ ನಿರ್ವಹಿಸುತ್ತೀರುವ ಚಟುವಟಿಕೆ/ವ್ಯವಹಾರದ ಬಗ್ಗೆ ಸಂಕ್ಷಿಪ್ತ ವರದಿ | |

ಟೆಂಡರ್‌ದಾರರ ಸಹಿ

ಮೊಹರು

ಟೆಂಡರ್‌ದಾರರ ಸಹಿ

# ಅನುಬಂಧ-2

## <u>ಟೆಂಡರ್ ಫಾರ್ಮ್</u> (ಅರ್ಥಿಕ ಬಿಡ್)

**ಸಂಖ್ಯೆ:ಕ.ಮಿ.ಅ.ನಿ.ನಿ/ಹೆಬ್ಬಾಳ/7/ಶೀ.ಸಂ/ಲೈಸೆನ್ಸ್/2015-16** **ದಿನಾಂಕ: 03.09.2015**

**ಚಲನವಾಣಿ ಸಂಖ್ಯೆ:**

**ಇವರಿಂದ,**

**ಇವರಿಗೆ,**

ವ್ಯವಸ್ಥಾಪಕ ನಿರ್ದೇಶಕರು
ಕ.ಮಿ.ಅ.ನಿ.ನಿ,
ಹ್ಯೊಗೆ ಬಜಾರ್, ಮಂಗಳೂರು.

| | |
|---|---|
| ನಿಗಮದ ಹೆಬ್ಬಾಳ ಶೀತಲಾಗಾರ ಸಂಕೀರ್ಣಕ್ಕೆ ನೀಡುವ **ಒಟ್ಟು ಮಾಸಿಕ ಲೈಸೆನ್ಸ್ ಫೀ (ತೆರಿಗೆ ಹೊರತುಪಡಿಸಿ)** | ರೂ.------------------------ (ತೆರಿಗೆ ಪ್ರತ್ಯೇಕ)<br><br>ಅಕ್ಷರಗಳಲ್ಲಿ: ರೂಪಾಯಿ ----------------------------<br>--------------------------------------------- |

:

ಈ ಕೆಳಗೆ ಸಹಿ ಮಾಡಿರುವ ನಾನು ಈ ಮೂಲಕ ದೃಢೀಕರಿಸುವುದೇನೆಂದರೆ ನಿಗಮವು ಹೆಬ್ಬಾಳದಲ್ಲಿ ನಿರ್ಮಿಸಿರುವ ಶೀತಲಾಗಾರ ಸಂಕೀರ್ಣವನ್ನು ಲೈಸೆನ್ಸ್ ಮೇಲೆ ಪಡೆಯುವ ಬಗ್ಗೆ ನಿಗಮದ **ದಿನಾಂಕ 03/09/2015** ರ ಟೆಂಡರ್ ಪ್ರಕಟನೆ ಹಾಗೂ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಸಂಪೂರ್ಣವಾಗಿ ಓದಿ ತಿಳಿದಿದ್ದು, ಈ ಷರತ್ತುಗಳಿಗೆ ಬದ್ದನಾಗಿದ್ದೇನೆ.

**ಟೆಂಡರ್‌ದಾರರ ಸಹಿ ಮತ್ತು ವಿಳಾಸ**

**ಮೊಹರು** **ಟೆಂಡರ್‌ದಾರರ ಸಹಿ**